# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2038 |
| ಉತ್ತರಿಸಬೇಕಾದ ದಿನಾಂಕ | : | 27.03.2020. |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಪಶುಭಾಗ್ಯ ಯೋಜನೆಯಡಿಯಲ್ಲಿ ನಿಗಧಿಪಡಿಸಲಾಗಿರುವ ಫಲಾನುಭವಿಗಳ ಗುರಿ ಎಷ್ಟು; ವಿಧಾನ ಸಭಾ ಕ್ಷೇತ್ರವಾರು ಹಾಗೂ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಪಶು ಭಾಗ್ಯ ಯೋಜನೆಯಡಿಯಲ್ಲಿ (ವಿಧಾನಸಭಾ ಕ್ಷೇತ್ರವಾರು ಹಾಗೂ ತಾಲ್ಲೂಕುವಾರು) ನಿಗದಿಪಡಿಸಲಾಗಿರುವ ಫಲಾನುಭವಿ ಗುರಿಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ. | ಪಶುಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಪಶು ಭಾಗ್ಯ ಯೋಜನೆಯಡಿ ಫಲಾನುಭವಿಗಳ ಆಯ್ಕೆಯ ಮಾರ್ಗಸೂಚಿಗಳನ್ವಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಸಮಿತಿಯ ಮೂಲಕ ನಿಯಮಾನುಸಾರ ಆಯ್ಕೆ ಮಾಡಿ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. (ಅನುಬಂಧ-2 ರಲ್ಲಿ ಮಾರ್ಗಸೂಚಿಯನ್ನು ಲಗತ್ತಿಸಿದೆ) |
| ಇ. | ಕೆಲವು ತಾಲ್ಲೂಕುಗಳಲ್ಲಿ ಲಾಟರಿ ಮುಖೇನ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಲಾಟರಿ ಮುಖೇನ ಆಯ್ಕೆ ಮಾಡಿರುವ ಫಲಾನುಭವಿಗಳಿಗೆ ಸವಲತ್ತುಗಳನ್ನು ನೀಡಲಾಗಿದೆಯೇ; ಇಲ್ಲವಾದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | • ಕೆಲವು ತಾಲ್ಲೂಕುಗಳಲ್ಲಿ ಲಾಟರಿ ಮುಖೇನ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ<br>• ಆಯ್ಕೆ ಸಮಿತಿಯು ಗುರುತಿಸಿದ ಫಲಾನುಭವಿಗಳಿಗೆ ಸವಲತ್ತುಗಳನ್ನು ನೀಡಲಾಗಿದೆ |

| | | |
|---|---|---|
| ಈ | ರಾಜ್ಯದಲ್ಲಿ ಪಶುಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಕಾನೂನು ಬಾಹಿರವಾಗಿ ಪಶುಗಳನ್ನು ಖರೀದಿಸದ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಅಕ್ರಮದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ರಾಜ್ಯದಲ್ಲಿ ಪಶು ಭಾಗ್ಯ ಯೋಜನೆಯಡಿ ಕಾನೂನು ಬಾಹಿರವಾಗಿ ಪಶುಗಳನ್ನು ಖರೀದಿಸಿದ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಿರುವುದಿಲ್ಲ. |

**ಪಸಂಮೀ 147 ಸಲೆವಿ 2020**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,

## ಅನುಬಂಧ-1

### ವಿಧಾನ ಪರಿಷತ್ತ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 2038 ಕ್ಕೆ

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಪಶುಭಾಗ್ಯ ಯೋಜನೆಯಡಿಯಲ್ಲಿ ನಿಗದಿಪಡಿಸಲಾಗಿರುವ ಫಲಾನುಭವಿಗಳ ಗುರಿಗಳ ವಿವರ (ವಿಧಾನಸಭಾ ಕ್ಷೇತ್ರವಾರು ಹಾಗೂ ತಾಲ್ಲೂಕುವಾರು ಸಂಪೂರ್ಣ ಮಾಹಿತಿ)

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | 2016-17 | 2017-18 | 2018-19 | 2019-20 |
|---|---|---|---|---|---|---|---|
| 1 | ಬೆಂಗಳೂರು ನಗರ | ಆನೇಕಲ್ | ಆನೇಕಲ್ | 855 | 228 | 514 | 54 |
| | | ಬೆಂಗಳೂರು ದಕ್ಷಿಣ | ಯಶವಂತಪುರ | 306 | 172 | 59 | 30 |
| | | | ಬೆಂಗಳೂರು ದಕ್ಷಿಣ | 48 | 20 | 14 | 5 |
| | | ಬೆಂಗಳೂರು ಪೂರ್ವ | ಮಹದೇವಪುರ | 125 | 158 | 17 | 42 |
| | | ಬೆಂಗಳೂರು ಉತ್ತರ | ಯಲಹಂಕ | 162 | 125 | 191 | 54 |
| | ಒಟ್ಟು | | | 1496 | 703 | 795 | 185 |
| 2 | ಬೆಂಗಳೂರು ಗ್ರಾಮ | ದೇವನಹಳ್ಳಿ | ದೇವನಹಳ್ಳಿ | 98 | 78 | 240 | 35 |
| | | ದೊಡ್ಡಬಳ್ಳಾಪುರ | ದೊಡ್ಡಬಳ್ಳಾಪುರ | 144 | 140 | 198 | 43 |
| | | ಹೊಸಕೋಟೆ | ಹೊಸಕೋಟೆ | 119 | 290 | 201 | 35 |
| | | ನೆಲಮಂಗಲ | ನೆಲಮಂಗಲ | 106 | 163 | 219 | 28 |
| | ಒಟ್ಟು | | | 467 | 671 | 858 | 141 |
| 3 | ರಾಮನಗರ | ರಾಮನಗರ | ರಾಮನಗರ | 100 | 111 | 7 | 26 |
| | | ಚನ್ನಪಟ್ಟಣ | ಚನ್ನಪಟ್ಟಣ | 152 | 106 | 6 | 23 |
| | | ಮಾಗಡಿ | ಮಾಗಡಿ | 115 | 127 | 6 | 19 |
| | | ಕನಕಪುರ | ಕನಕಪುರ | 144 | 110 | 10 | 34 |
| | ಒಟ್ಟು | | | 511 | 454 | 29 | 102 |
| 4 | ತುಮಕೂರು | ಚಿ.ನಾ.ಹಳ್ಳಿ | ಚಿ.ನಾ.ಹಳ್ಳಿ | 116 | 52 | 150 | 30 |
| | | ಗುಬ್ಬಿ | ಗುಬ್ಬಿ | 0 | 143 | 145 | 29 |
| | | | ತುರುವೇಕೆರೆ | 0 | 27 | 26 | 7 |
| | | ಕೊರಟಗೆರೆ | ಕೊರಟಗೆರೆ | 78 | 81 | 143 | 26 |
| | | ಕುಣಿಗಲ್ | ಕುಣಿಗಲ್ | 117 | 114 | 99 | 28 |
| | | ಮಧುಗಿರಿ | ಮಧುಗಿರಿ | 124 | 158 | 210 | 37 |
| | | | ಕೊರಟಗೆರೆ | 19 | 23 | 37 | 6 |
| | | ಪಾವಗಡ | ಪಾವಗಡ | 41 | 171 | 183 | 43 |
| | | ಶಿರಾ | ಶಿರಾ | 138 | 128 | 204 | 38 |
| | | | ಚಿ.ನಾ.ಹಳ್ಳಿ | 34 | 26 | 51 | 9 |
| | | ತಿಪಟೂರು | ತಿಪಟೂರು | 107 | 113 | 111 | 30 |
| | | ತುಮಕೂರು | ನಗರ | 34 | 38 | 62 | 57 |
| | | | ಗ್ರಾಮೀಣ | 0 | 131 | 246 | 10 |
| | | | ಕೊರಟಗೆರೆ | 38 | 30 | 60 | 13 |
| | | ತುರುವೇಕೆರೆ | ತುರುವೇಕೆರೆ | 40 | 81 | 80 | 22 |
| | ಒಟ್ಟು | | | 886 | 1316 | 1807 | 385 |
| 5 | ಚಿತ್ರದುರ್ಗ | ಚಿತ್ರದುರ್ಗ | ಚಿತ್ರದುರ್ಗ | 125 | 162 | 281 | 37 |
| | | | ಚಳ್ಳಕೆರೆ | 50 | 66 | 73 | 17 |
| | | | ಹೊಳಲ್ಕೆರೆ | 50 | 53 | 70 | 16 |
| | | ಚಳ್ಳಕೆರೆ | ಚಳ್ಳಕೆರೆ | 94 | 158 | 193 | 38 |
| | | | ಮೊಳಕಾಲ್ಮೂರು | 53 | 54 | 152 | 40 |
| | | ಮೊಳಕಾಲ್ಮೂರು | ಮೊಳಕಾಲ್ಮೂರು | 123 | 116 | 197 | 32 |

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | 2016-17 | 2017-18 | 2018-19 | 2019-20 |
|---|---|---|---|---|---|---|---|
| | | ಹೊಸದುರ್ಗ | ಹೊಸದುರ್ಗ | 190 | 147 | 268 | 44 |
| | | ಹೊಳಲ್ಕೆರೆ | ಹೊಳಲ್ಕೆರೆ | 127 | 92 | 240 | 46 |
| | | ಹಿರಿಯೂರು | ಹಿರಿಯೂರು | 190 | 147 | 268 | 44 |
| | ಒಟ್ಟು | | | 1002 | 995 | 1742 | 314 |
| 6 | ಕೋಲಾರ | ಬಂಗಾರಪೇಟೆ | ಬಂಗಾರಪೇಟೆ | 98 | 106 | 58 | 25 |
| | | ಕೋಲಾರ | ಕೆ.ಜಿ.ಎಫ್ | 67 | 102 | 55 | 23 |
| | | | ಕೋಲಾರ | 82 | 151 | 50 | 29 |
| | | ಮುಳಬಾಗಿಲು | ಮುಳಬಾಗಿಲು | 120 | 120 | 50 | 26 |
| | | ಮಾಲೂರು | ಮಾಲೂರು | 113 | 105 | 50 | 27 |
| | | ಶ್ರೀನಿವಾಸಪುರ | ಶ್ರೀನಿವಾಸಪುರ | 120 | 231 | 56 | 29 |
| | ಒಟ್ಟು | | | 600 | 815 | 319 | 159 |
| 7 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಬಾಗೇಪಲ್ಲಿ | 79 | 143 | 493 | 35 |
| | | ಗುಡಿಬಂಡಿ | | 38 | 44 | 140 | 19 |
| | | ಚಿಂತಾಮಣಿ | ಚಿಂತಾಮಣಿ | 91 | 174 | 534 | 51 |
| | | ಗೌರಿಬಿದನೂರು | ಗೌರಿಬಿದನೂರು | 113 | 206 | 595 | 52 |
| | | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 44 | 144 | 570 | 40 |
| | | ಶಿಡ್ಲಘಟ್ಟ | ಶಿಡ್ಲಘಟ್ಟ | 63 | 134 | 519 | 33 |
| | ಒಟ್ಟು | | | 428 | 845 | 2851 | 220 |
| 8 | ದಾವಣಗೆರೆ | ದಾವಣಗೆರೆ | ದಾವಣಗೆರೆ ಉತ್ತರ | 33 | 122 | 462 | 38 |
| | | | ದಾವಣಗೆರೆ ದಕ್ಷಿಣ | 31 | 117 | 345 | 35 |
| | | | ಮಾಯಕೊಂಡ | 106 | 159 | 751 | 48 |
| | | ಹರಿಹರ | ಹರಿಹರ | 110 | 95 | 415 | 34 |
| | | ಚನ್ನಗಿರಿ | ಚನ್ನಗಿರಿ | 107 | 103 | 603 | 45 |
| | | ಜಗಳೂರು | ಜಗಳೂರು | 156 | 107 | 825 | 46 |
| | | ಹೊನ್ನಾಳಿ | ಹೊನ್ನಾಳಿ | 129 | 147 | 504 | 40 |
| | | ಹರಪನಹಳ್ಳಿ | ಹರಪನಹಳ್ಳಿ | 116 | 111 | 729 | 0 |
| | ಒಟ್ಟು | | | 788 | 961 | 4634 | 286 |
| 9 | ಶಿವಮೊಗ್ಗ | ಶಿವಮೊಗ್ಗ | ಶಿವಮೊಗ್ಗ ನಗರ | 29 | 89 | 87 | 18 |
| | | | ಶಿವಮೊಗ್ಗ ಗ್ರಾಮಾಂತರ | 126 | 80 | 100 | 29 |
| | | | ತೀರ್ಥಹಳ್ಳಿ | 15 | 45 | 35 | 1 |
| | | ಭದ್ರಾವತಿ | ಭದ್ರಾವತಿ | 93 | 126 | 97 | 30 |
| | | | ಶಿವಮೊಗ್ಗ ಗ್ರಾಮಾಂತರ | 22 | 79 | 71 | 12 |
| | | ಶಿಕಾರಿಪುರ | ಶಿಕಾರಿಪುರ | 126 | 122 | 177 | 38 |
| | | ಸೊರಬ | ಸೊರಬ | 123 | 71 | 117 | 28 |
| | | ಸಾಗರ | ಸಾಗರ | 94 | 80 | 79 | 14 |
| | | | ಸೊರಬ | 0 | 59 | 39 | 4 |
| | | ಹೊಸನಗರ | ಸಾಗರ | 50 | 53 | 41 | 13 |
| | | | ತೀರ್ಥಹಳ್ಳಿ | 18 | 34 | 39 | 1 |
| | | ತೀರ್ಥಹಳ್ಳಿ | ತೀರ್ಥಹಳ್ಳಿ | 91 | 50 | 78 | 19 |
| | ಒಟ್ಟು | | | 787 | 888 | 960 | 207 |
| 10 | ಮೈಸೂರು | ಹೆಚ್.ಡಿ. ಕೋಟೆ | ಹೆಚ್.ಡಿ.ಕೋಟೆ | 154 | 129 | 393 | 40 |
| | | ಹುಣಸೂರು | ಹುಣಸೂರು | 126 | 137 | 313 | 57 |
| | | ಕೆ.ಆರ್. ನಗರ | ಕೆ.ಆರ್.ನಗರ | 123 | 122 | 210 | 47 |

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | 2016-17 | 2017-18 | 2018-19 | 2019-20 |
|---|---|---|---|---|---|---|---|
| | | ಮೈಸೂರು | ಚಾಮುಂಡೇಶ್ವರಿ | 69 | 77 | 231 | 43 |
| | | | ವರುಣ | 131 | 163 | 266 | 27 |
| | | ನಂಜನಗೂಡು | ನಂಜನಗೂಡು | 82 | 113 | 312 | 55 |
| | | ಪಿರಿಯಾಪಟ್ಟಣ | ಪಿರಿಯಾಪಟ್ಟಣ | 119 | 118 | 218 | 37 |
| | | ತಿ.ನರಸೀಪುರ | ತಿ.ನರಸೀಪುರ | 113 | 105 | 258 | 49 |
| | | | | 917 | 964 | 2201 | 355 |
| 11 | ಮಂಡ್ಯ | ಮಂಡ್ಯ | ಮಂಡ್ಯ | 113 | 159 | 184 | 49 |
| | | ಮದ್ದೂರು | ಮದ್ದೂರು | 170 | 147 | 155 | 36 |
| | | ಮಳವಳ್ಳಿ | ಮಳವಳ್ಳಿ | 144 | 231 | 210 | 40 |
| | | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ | 89 | 132 | 135 | 24 |
| | | ಪಾಂಡವಪುರ | ಮೇಲುಕೋಟೆ | 91 | 112 | 131 | 22 |
| | | ಕೆ.ಆರ್. ಪೇಟೆ | ಕೆ.ಆರ್. ಪೇಟೆ | 101 | 95 | 160 | 30 |
| | | ನಾಗಮಂಗಲ | ನಾಗಮಂಗಲ | 92 | 139 | 117 | 21 |
| | | | | 800 | 1015 | 1092 | 222 |
| 12 | ಚಾಮರಾಜನಗರ | ಚಾಮರಾಜನಗರ | ಚಾಮರಾಜನಗರ | 54 | 50 | 17 | 0 |
| | | ಗುಂಡ್ಲುಪೇಟೆ | ಗುಂಡ್ಲುಪೇಟೆ | 71 | 52 | 13 | 0 |
| | | ಕೊಳ್ಳೇಗಾಲ | ಕೊಳ್ಳೇಗಾಲ | 92 | 54 | 8 | 0 |
| | | ಯಳಂದೂರು | ಹನೂರು | 63 | 50 | 9 | 0 |
| | | | | 280 | 206 | 47 | 0 |
| 13 | ಚಿಕ್ಕಮಗಳೂರು | ಚಿಕ್ಕಮಗಳೂರು | ಚಿಕ್ಕಮಗಳೂರು | 79 | 213 | 185 | 37 |
| | | ಕಡೂರು | ಕಡೂರು | 96 | 230 | 300 | 48 |
| | | ಕೊಪ್ಪ | ಶೃಂಗೇರಿ | 32 | 51 | 97 | 14 |
| | | ಎನ್.ಆರ್.ಪುರ | | 23 | 30 | 64 | 8 |
| | | ಶೃಂಗೇರಿ | | 12 | 53 | 59 | 8 |
| | | ಮೂಡಿಗೆರೆ | ಮೂಡಿಗೆರೆ | 50 | 67 | 89 | 16 |
| | | ತರೀಕೆರೆ | ತರೀಕೆರೆ | 79 | 195 | 204 | 42 |
| | | | | 371 | 839 | 998 | 173 |
| 14 | ಹಾಸನ | ಆಲೂರು,ಸಕಲೇಶಪುರ,ಹಾಸನ | ಆಲೂರು-ಸಕಲೇಶಪುರ | 131 | 156 | 35 | 25 |
| | | ಅರಕಲಗೂಡು,ಹೊಳೆನರಸೀಪುರ | ಅರಕಲಗೂಡು | 491 | 669 | 31 | 21 |
| | | ಅರಸೀಕೆರೆ | ಅರಸೀಕೆರೆ | 136 | 150 | 48 | 33 |
| | | ಬೇಲೂರು,ಅರಸೀಕೆರೆ | ಬೇಲೂರು | 104 | 119 | 32 | 23 |
| | | ಚನ್ನರಾಯಪಟ್ಟಣ | ಶ್ರವಣಬೆಳಗೊಳ | 123 | 141 | 33 | 25 |
| | | ಹಾಸನ | ಹಾಸನ | 156 | 158 | 45 | 35 |
| | | ಹೊಳೆನರಸೀಪುರ, ಚನ್ನರಾಯಪಟ್ಟಣ,ಹಾಸನ | ಹೊಳೆನರಸೀಪುರ | 274 | 114 | 28 | 19 |
| | | | | 1415 | 1507 | 252 | 181 |
| 15 | ದಕ್ಷಿಣ ಕನ್ನಡ | ಮಂಗಳೂರು | ಮಂಗಳೂರು | 60 | 78 | 70 | 10 |
| | | | ಮಂಗಳೂರು ಉತ್ತರ | 97 | 82 | 85 | 12 |
| | | | ಮಂಗಳೂರು ದಕ್ಷಿಣ | 25 | 53 | 80 | 8 |
| | | | ಮುಲ್ಕಿ-ಮೂಡುಬಿದ್ರೆ | 65 | 75 | 90 | 10 |
| | | ಭಂಟ್ವಾಳ | ಭಂಟ್ವಾಳ | 98 | 108 | 99 | 27 |
| | | ಬೆಳ್ತಂಗಡಿ | ಬೆಳ್ತಂಗಡಿ | 90 | 78 | 98 | 26 |
| | | ಪುತ್ತೂರು | ಪುತ್ತೂರು | 87 | 90 | 94 | 20 |

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | 2016-17 | 2017-18 | 2018-19 | 2019-20 |
|---|---|---|---|---|---|---|---|
| | | ಸುಳ್ಯ | ಸುಳ್ಯ | 92 | 40 | 95 | 42 |
| | ಒಟ್ಟು | | | 614 | 604 | 711 | 155 |
| 16 | ಉಡುಪಿ | ಉಡುಪಿ | ಉಡುಪಿ | 59 | 6 | 81 | 33 |
| | | | ಕಾಪು | 26 | 54 | 77 | 25 |
| | | ಕುಂದಾಪುರ | ಕುಂದಾಪುರ | 59 | 4 | 66 | 6 |
| | | | ಬೈಂದೂರು | 52 | 1 | 64 | 20 |
| | | ಕಾರ್ಕಳ | ಕಾರ್ಕಳ | 84 | 52 | 92 | 25 |
| | ಒಟ್ಟು | | | 280 | 117 | 380 | 109 |
| 17 | ಕೊಡಗು | ಮಡಿಕೇರಿ | ಮಡಿಕೇರಿ | 21 | 29 | 1401 | 21 |
| | | ಸೋಮವಾರಪೇಟೆ | | 79 | 69 | 173 | 25 |
| | | ವಿರಾಜಪೇಟೆ | ವಿರಾಜಪೇಟೆ | 38 | 69 | 152 | 25 |
| | ಒಟ್ಟು | | | 138 | 167 | 1726 | 71 |
| 18 | ಬೆಳಗಾವಿ | ಅಥಣಿ | ಅಥಣಿ | 73 | 69 | 300 | 29 |
| | | | ಕಾಗವಾಡ | 54 | 69 | 302 | 29 |
| | | ಬೈಲಹೊಂಗಲ | ಬೈಲಹೊಂಗಲ | 79 | 85 | 341 | 35 |
| | | | ಕಿತ್ತೂರ | 65 | 63 | 205 | 28 |
| | | ಬೆಳಗಾವಿ | ಬೆಳಗಾವಿ(ಉ) | 9 | 8 | 106 | 24 |
| | | | ಬೆಳಗಾವಿ(ದ) | 7 | 11 | 105 | 24 |
| | | | ಬೆಳಗಾವಿ(ಗ್ರಾ) | 65 | 61 | 152 | 27 |
| | | ಚಿಕ್ಕೋಡಿ | ಚಿಕ್ಕೋಡಿ | 70 | 75 | 230 | 30 |
| | | | ನಿಪ್ಪಾಣಿ | 35 | 69 | 231 | 30 |
| | | ಗೋಕಾಕ | ಗೋಕಾಕ | 41 | 80 | 362 | 32 |
| | | | ಅರಭಾಂವಿ | 101 | 83 | 351 | 31 |
| | | ಹುಕ್ಕೇರಿ | ಹುಕ್ಕೇರಿ | 104 | 81 | 341 | 30 |
| | | | ಯಮಕನಮರಡಿ | 76 | 126 | 504 | 46 |
| | | ಖಾನಾಪೂರ | ಖಾನಾಪೂರ | 100 | 105 | 200 | 24 |
| | | ರಾಯಬಗ | ರಾಯಬಾಗ | 74 | 71 | 377 | 40 |
| | | | ಕುಡಚಿ | 54 | 71 | 258 | 29 |
| | | ರಾಮದುರ್ಗ | ರಾಮದುರ್ಗ | 113 | 111 | 305 | 27 |
| | | ಸವದತ್ತಿ | ಸವದತ್ತಿ | 97 | 98 | 331 | 25 |
| | ಒಟ್ಟು | | | 1217 | 1336 | 5001 | 535 |
| 19 | ಉತ್ತರ ಕನ್ನಡ | ಅಂಕೋಲ | ಕಾರವಾರ | 36 | 44 | 5 | 8 |
| | | ಕಾರವಾರ | | 42 | 20 | 4 | 5 |
| | | ಭಟ್ಕಳ | ಭಟ್ಕಳ | 107 | 53 | 4 | 10 |
| | | ಹೊನ್ನಾವರ | ಭಟ್ಕಳ ಮತ್ತು ಕುಮಟಾ | 104 | 49 | 5 | 10 |
| | | ಕುಮಟಾ | ಕುಮಟಾ | 54 | 39 | 3 | 8 |
| | | ಹಳಿಯಾಳ | ಹಳಿಯಾಳ | 182 | 143 | 14 | 13 |
| | | ಜೋಯಿಡಾ | | 115 | 77 | 4 | 5 |
| | | ಶಿರಸಿ | ಶಿರಸಿ | 123 | 102 | 12 | 15 |
| | | ಸಿದ್ದಾಪುರ | | 114 | 65 | 7 | 13 |
| | | ಮುಂಡಗೋಡ | ಯಲ್ಲಾಪುರ | 173 | 102 | 13 | 12 |
| | | ಯಲ್ಲಾಪುರ | | 118 | 59 | 7 | 9 |
| | ಒಟ್ಟು | | | 1168 | 753 | 78 | 108 |

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | 2016-17 | 2017-18 | 2018-19 | 2019-20 |
|---|---|---|---|---|---|---|---|
| 20 | ಹಾವೇರಿ | ಹಾವೇರಿ | ಹಾವೇರಿ | 114 | 102 | 160 | 30 |
| | | | ಬ್ಯಾಡಗಿ | 38 | 30 | 37 | 7 |
| | | ಹಾನಗಲ್ | ಹಾನಗಲ್ | 127 | 124 | 188 | 34 |
| | | ಬ್ಯಾಡಗಿ | ಬ್ಯಾಡಗಿ | 73 | 70 | 119 | 19 |
| | | ಹಿರೆಕೆರೂರು | ಹಿರೆಕೆರೂರು | 124 | 110 | 193 | 30 |
| | | ಶಿಗ್ಗಾಂವ್ | ಶಿಗ್ಗಾಂವ್ | 101 | 91 | 125 | 25 |
| | | ಸವಣೂರು | ಶಿಗ್ಗಾಂವ್ | 43 | 40 | 76 | 13 |
| | | | ಸವಣೂರು | 43 | 41 | 60 | 10 |
| | | ರಾಣೆಬೆನ್ನೂರು | ರಾಣೆಬೆನ್ನೂರು | 124 | 139 | 183 | 38 |
| | | | ಬ್ಯಾಡಗಿ | 30 | 25 | 39 | 7 |
| | ಒಟ್ಟು: | | | 817 | 772 | 1180 | 213 |
| 21 | ಧಾರವಾಡ | ಧಾರವಾಡ | ಹುಬ್ಬಳ್ಳಿ-ಧಾರವಾಡ ಗ್ರಾ | 201 | 84 | 94 | 15 |
| | | | ಕಲಘಟಗಿ | 73 | 57 | 26 | 8 |
| | | | ಹುಬ್ಬಳ್ಳಿ-ಧಾರವಾಡ ಪಶ್ಚಿ | 0 | 0 | 28 | 0 |
| | | ಹುಬ್ಬಳ್ಳಿ | ಹುಬ್ಬಳ್ಳಿ-ಧಾರವಾಡ ಪೂ | 0 | 0 | 2 | 0 |
| | | | ಹುಬ್ಬಳ್ಳಿ-ಧಾರವಾಡ ಪಶ್ಚಿ | 0 | 0 | 1 | 0 |
| | | | ಹುಬ್ಬಳ್ಳಿ-ಧಾರವಾಡ ಕೇಂ | 0 | 0 | 0 | 0 |
| | | | ಕುಂದಗೋಳ | 27 | 29 | 5 | 13 |
| | | | ನವಲಗುಂದ | 24 | 23 | 2 | 11 |
| | | ಕಲಘಟಗಿ | ಕಲಘಟಗಿ | 134 | 122 | 62 | 20 |
| | | ಕುಂದಗೋಳ | ಕುಂದಗೋಳ | 104 | 73 | 72 | 21 |
| | | ನವಲಗುಂದ | ನವಲಗುಂದ | 116 | 132 | 72 | 22 |
| | ಒಟ್ಟು: | | | 679 | 520 | 864 | 110 |
| 22 | ಗದಗ್ | ಗದಗ | ಗದಗ | 159 | 410 | 435 | 51 |
| | | ನರಗುಂದ | ನರಗುಂದ | 56 | 50 | 129 | 9 |
| | | ರೋಣ | ರೋಣ | 157 | 123 | 334 | 23 |
| | | ಮುಂಡರಗಿ | | 40 | 40 | 100 | 10 |
| | | ಶಿರಹಟ್ಟಿ | ಶಿರಹಟ್ಟಿ | 121 | 120 | 278 | 26 |
| | | ಮುಂಡರಗಿ | | 59 | 55 | 80 | 7 |
| | ಒಟ್ಟು: | | | 592 | 798 | 1356 | 126 |
| 23 | ವಿಜಯಪುರ | ಸಿಂದಗಿ | ಸಿಂದಗಿ | 61 | 72 | 150 | 32 |
| | | | ದೇವರಹಿಪ್ಪರಗಿ | 40 | 43 | 105 | 24 |
| | | ಬಾಗೇವಾಡಿ | ಬಾಗೇವಾಡಿ | 63 | 66 | 169 | 34 |
| | | | ದೇವರಹಿಪ್ಪರಗಿ | 30 | 35 | 80 | 17 |
| | | ಇಂಡಿ | ಇಂಡಿ | 106 | 80 | 374 | 36 |
| | | | ನಾಗಠಾಣ | 26 | 29 | 130 | 18 |
| | | | ಸಿಂದಗಿ | 9 | 10 | 23 | 5 |
| | | ವಿಜಯಪುರ | ವಿಜಯಪುರ | 39 | 67 | 97 | 30 |
| | | | ಬಬಲೇಶ್ವರ | 93 | 200 | 292 | 39 |
| | | | ನಾಗಠಾಣ | 39 | 67 | 97 | 31 |
| | | ಮುದೇಬಿಹಾಳ | ಮುದ್ದೇಬಿಹಾಳ | 78 | 76 | 58 | 34 |
| | | | ದೇವರಹಿಪ್ಪರಗಿ | 19 | 12 | 10 | 6 |

| ಕ್ರ.ಸಂ. | ಜಿಲ್ಲೆಗಳು | ತಾಲ್ಲೂಕು | ವಿಧಾನ ಸಭಾ ಕ್ಷೇತ್ರ | 2016-17 | 2017-18 | 2018-19 | 2019-20 |
|---|---|---|---|---|---|---|---|
| | [illegible] | | | 603 | 757 | 1585 | 306 |
| 24 | ಬಾಗಲಕೋಟೆ | ಬಾದಾಮಿ | ಬಾದಾಮಿ | 131 | 115 | 195 | 34 |
| | | | ಬೀಳಗಿ | 26 | 30 | 68 | 8 |
| | | ಬಾಗಲಕೋಟೆ | ಬಾಗಲಕೋಟೆ | 120 | 118 | 161 | 32 |
| | | | ಬೀಳಗಿ | 15 | 7 | 31 | 1 |
| | | ಹುನಗುಂದ | ಹುನಗುಂದ | 130 | 113 | 168 | 34 |
| | | | ಬಾಗಲಕೋಟೆ | 17 | 24 | 34 | 7 |
| | | ಜಮಖಂಡಿ | ಜಮಖಂಡಿ | 108 | 115 | 142 | 30 |
| | | | ತೇರದಾಳ | 83 | 81 | 103 | 21 |
| | | ಮುಧೋಳ | ಮುಧೋಳ | 111 | 113 | 202 | 37 |
| | | | ತೇರದಾಳ | 26 | 30 | 29 | 7 |
| | | ಬೀಳಗಿ | ಬೀಳಗಿ | 76 | 55 | 114 | 21 |
| | [illegible] | | | 843 | 801 | 1247 | 282 |
| 25 | ಗುಲ್ಬರ್ಗಾ | ಅಫಜಲಪುರ | ಅಫಜಲಪುರ | 136 | 110 | 307 | 36 |
| | | ಆಳಂದ | ಆಳಂದ | 201 | 155 | 629 | 62 |
| | | ಚಿಂಚೋಳಿ | ಚಿಂಚೋಳಿ | 177 | 139 | 685 | 56 |
| | | ಚಿತ್ತಾಪುರ | ಚಿತ್ತಾಪುರ | 194 | 144 | 644 | 60 |
| | | ಜೇವರ್ಗಿ | ಜೇವರ್ಗಿ | 183 | 143 | 565 | 56 |
| | | ಕಲಬುರ್ಗಿ | ಕಲಬುರ್ಗಿ ಉತ್ತರ | 0 | 0 | 0 | 0 |
| | | | ಕಲಬುರ್ಗಿ ದಕ್ಷಿಣ | 37 | 21 | 175 | 33 |
| | | | ಕಲಬುರ್ಗಿ ಗ್ರಾಮಾಂತರ | 162 | 113 | 533 | 30 |
| | | ಸೇಡಂ | ಸೇಡಂ | 124 | 95 | 401 | 38 |
| | [illegible] | | | 1214 | 920 | 3939 | 371 |
| 26 | ಬಳ್ಳಾರಿ | ಬಳ್ಳಾರಿ | ಬಳ್ಳಾರಿ ಗ್ರಾಮಾಂತರ | 65 | 116 | 51 | 26 |
| | | | ಬಳ್ಳಾರಿ ನಗರ | 25 | 53 | 49 | 0 |
| | | | ಸಂಡೂರು | 21 | 5 | 5 | 1 |
| | | | ಕಂಪ್ಲಿ | 12 | 23 | 30 | 23 |
| | | ಸಿರಗುಪ್ಪ | ಸಿರುಗುಪ್ಪ | 82 | 117 | 52 | 28 |
| | | ಸಂಡೂರು | ಸಂಡೂರು | 91 | 120 | 50 | 27 |
| | | ಹೊಸಪೇಟೆ | ವಿಜಯನಗರ | 50 | 89 | 57 | 12 |
| | | | ಹೆಚ್.ಬಿ.ಹಳ್ಳಿ | 12 | 55 | 14 | 6 |
| | | | ಕಂಪ್ಲಿ | 7 | 20 | 18 | 10 |
| | | ಹಗರಿಬೊಮ್ಮನಹಳ್ಳಿ | ಹೆಚ್.ಬಿ.ಹಳ್ಳಿ | 80 | 69 | 33 | 23 |
| | | | ಹಡಗಲಿ | 20 | 36 | 11 | 4 |
| | | ಹಡಗಲಿ | ಹಡಗಲಿ | 78 | 134 | 40 | 26 |
| | [illegible] | | | 543 | 837 | 410 | 186 |
| 27 | ರಾಯಚೂರು | ಸಿಂಧನೂರು | ಸಿಂಧನೂರು | 110 | 185 | 401 | 49 |
| | | | ಮಸ್ಕಿ | 40 | 70 | 156 | 17 |
| | | ಲಿಂಗಸುಗೂರು | ಲಿಂಗಸುಗೂರು | 130 | 176 | 522 | 51 |
| | | | ಮಸ್ಕಿ | 36 | 55 | 143 | 22 |
| | | ದೇವದುರ್ಗ | ದೇವದುರ್ಗ | 162 | 146 | 551 | 50 |
| | | ಮಾನ್ವಿ | ಮಾನ್ವಿ | 90 | 90 | 502 | 51 |
| | | | ರಾಯಚೂರು ಗ್ರಾಮೀಣ | 15 | 47 | 126 | 18 |

ಅನುಬಂಧ - 2

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2019-20 ನೇ ಸಾಲಿನ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಆಪಸಂ/ಯೋಜನೆ-3/ಪಿಪಿ-8/2019-20.

***

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಏಕ ಕಡತದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ 2019-20 ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗಾಗಿ ಆಯವ್ಯಯದಲ್ಲಿ "ಲೆಕ್ಕಶೀರ್ಷಿಕೆ:2403-00-001-0-04" ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಮೊತ್ತ ಉಪಶೀರ್ಷಿಕೆ 422 ವಿಶೇಷ ಘಟಕ ಯೋಜನೆಯಡಿ ರೂ. 745.59 ಲಕ್ಷಗಳು ಮತ್ತು ಉಪಶೀರ್ಷಿಕೆ 423 ಗಿರಿಜನ ಉಪಯೋಜನೆಯಡಿ ರೂ. 61.34 ಲಕ್ಷಗಳನ್ನು ಹಾಗೂ "ಲೆಕ್ಕಶೀರ್ಷಿಕೆ: 2404-00-191-1-16 ಮಹಿಳೆಯರಿಗಾಗಿ ಪಶುಸಂಗೋಪನಾ ಕಾರ್ಯಕ್ರಮ" ಇದರಡಿ ಉಪಶೀರ್ಷಿಕೆ 422 ವಿಶೇಷ ಘಟಕ ಯೋಜನೆಯಡಿ ರೂ. 271.00 ಲಕ್ಷಗಳು ಮತ್ತು ಉಪಶೀರ್ಷಿಕೆ:423 ಗಿರಿಜನ ಉಪಯೋಜನೆಯಡಿ ರೂ. 136.00 ಲಕ್ಷಗಳು ಹಾಗೂ ಉಪಶೀರ್ಷಿಕೆ 059 ಸಾಮಾನ್ಯರಡಿಯಲ್ಲಿ ರೂ. 493.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಲಾಗಿದೆ.

ಮುಂದುವರೆದು, ಪ್ರಸ್ತುತ ಸಾಲಿನಲ್ಲಿ ಇ-ಆಡಳಿತ ಇಲಾಖೆಯಿಂದ FRUITS-ID ಯನ್ನು ಬಳಸಿಕೊಂಡು ಪಶುಭಾಗ್ಯ ತಂತ್ರಾಂಶ ಹಾಗೂ ಅನುಕೂಲತೆಗಳ ಬಗ್ಗೆ ಒಳಗೊಂಡಿರುವ ಮಾರ್ಗಸೂಚಿಗಳನ್ನು ತಯಾರಿಸಬೇಕಾಗಿದ್ದು, ಅದರಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ತಯಾರಿಸಿ ಅನುಮೋದನೆ ನೀಡುವಂತೆ ಏಕ ಕಡತದಲ್ಲಿ ಕೋರಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು 2019-20 ನೇ ಸಾಲಿನ ಪಶುಭಾಗ್ಯ ತಂತ್ರಾಂಶದಿಂದ ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 29 ಪಪಾಯೋ 2019**
**ಬೆಂಗಳೂರು ದಿನಾಂಕ: 23.07.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20 ನೇ ಸಾಲಿನ ಪಶುಭಾಗ್ಯ ತಂತ್ರಾಂಶದಿಂದ ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳಿಗೆ ಈ ಆದೇಶಕ್ಕೆ ಲಗತ್ತಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರು ಅನುಷ್ಠಾನಾಧಿಕಾರಿಯಾಗಿದ್ದು, ನಿರ್ದೇಶಕರು, ಪಶುಪಾಲನಾ

-2-

ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ತಾಂತ್ರಿಕ ಸಹಯೋಗವನ್ನು ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(signature) 23/07/2019
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ& ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿವಿ ಗೋಪುರ ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
6. ಉಪನಿರ್ದೇಶಕರು, ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
7. ಸಂಬಂಧಪಟ್ಟ ಅಧಿಕಾರಿಗಳಿಗೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಮುಖಾಂತರ).
8. ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
10. ಸರ್ಕಾರದ ಕಾರ್ಯದರ್ಶಿಯವರ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
11. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

ಸಂ. ಆಪಸಂ : ಯೋಜನೆ- 3 : ವಿವ-8 : 2019-20

ಆಯುಕ್ತರವರ ಕಾರ್ಯಾಲಯ
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಬೆಂಗಳೂರು ದಿನಾಂಕ: 26-07-2019

ಪ್ರತಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ

(signature)
ಆಯುಕ್ತರ ಪರವಾಗಿ

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 29 ಪಪಾಯೋ 2019,
ದಿನಾಂಕ: 23.07.2019 ಕ್ಕೆ ಅನುಬಂಧ

2019-20 ನೇ ಸಾಲಿನ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಗಳು

1. "ಪಶುಭಾಗ್ಯ" ತಂತ್ರಾಂಶ

ಪಶುಪಾಲನೆ ಮತ್ತು ಪಶುವೈದ್ಯಸೇವಾ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಎಲ್ಲಾ ರೀತಿಯ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸಲು "ಪಶುಭಾಗ್ಯ" ತಂತ್ರಾಂಶವನ್ನು ಬಳಸಲಾಗುತ್ತಿದೆ. ಈ ಸಾಲಿನಿಂದ ಈ ರೀತಿಯ ಎಲ್ಲಾ ಯೋಜನೆಗಳ ಫಲಾನುಭವಿಗಳ ಆಯ್ಕೆ, ಅನುಷ್ಠಾನ ಮತ್ತು ಅನುಪಾಲನೆಗಳನ್ನು ಈ ತಂತ್ರಾಂಶವನ್ನು ಬಳಸಿಕೊಂಡೇ ಮಾಡಬೇಕು. ಈ ತಂತ್ರಾಂಶದ ಬಳಕೆಯಿಂದ ಫಲಾನುಭವಿಗಳಿಗೆ ಮತ್ತು ಇಲಾಖೆಗೆ ಕೆಳಕಾಣಿಸಿದ ಅನುಕೂಲಗಳು ಆಗಲಿದೆ.

ಫಲಾನುಭವಿ ಆಧಾರಿತ ಎಲ್ಲಾ ಯೋಜನೆಗಳ ಫಲಾನುಭವಿಗಳಿಗೆ FRUITS ID ಇರುವುದು ಕಡ್ಡಾಯವೆಂದು ಇ ಆಡಳಿತ ಇಲಾಖೆಯಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಅ) ಫಲಾನುಭವಿಗಳಿಗೆ ಸಂಬಂಧಿಸಿದ ಅನುಕೂಲಗಳು

1) ಒಂದು ಬಾರಿ ಇಲಾಖೆಯ ಯೋಜನೆಗಳಿಗೆ ಈ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿದ್ದಲ್ಲಿ ಪ್ರತಿ ವರ್ಷ ಸಲ್ಲಿಸುವ ಅಗತ್ಯ ಇರುವುದಿಲ್ಲ.

2) ಫಲಾನುಭವಿಯು ಸ್ವತಃ ತಾನೇ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಇಲಾಖೆಯ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಲ್ಲಿಯ ಅಧಿಕಾರಿಗಳಿಗೆ ಅಗತ್ಯ ಇರುವ ಮಾಹಿತಿ ನೀಡಿ FRUITS ID (ಗುರುತಿನ ಸಂಖ್ಯೆ) ಪಡೆಯಬಹುದು, ಒಮ್ಮೆ ಈ ರೀತಿ ಪಡೆದ ಗುರುತಿನ ಸಂಖ್ಯೆಯು, ಶಾಶ್ವತ ಗುರುತಿನ ಸಂಖ್ಯೆಯಾಗಲಿದ್ದು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯು ಸೇರಿದಂತೆ ಈ ಎಲ್ಲಾ ಇಲಾಖೆಗಳ ಸೌಲಭ್ಯ, ಸವಲತ್ತು ಪಡೆಯಲು ಬಳಸಬಹುದು.

3) FRUITS ID (ಗುರುತಿನ ಸಂಖ್ಯೆ) ಪಡೆದ ನಂತರ ಫಲಾನುಭವಿಗಳಿಗೆ ಸಂಬಂಧಿಸಿದ ಜಾತಿ ಪತ್ರ, ಜಮೀನು ಮಾಹಿತಿ, ಬಡತನ ರೇಖೆಗಿಂತ ಕೆಳಗಿರುವ ಬಗ್ಗೆ ದೃಢೀಕರಣ, ಫೋಟೊ ಮುಂತಾದ ದಾಖಲೆಗಳನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ.

4) ಫಲಾನುಭವಿಯು ಸ್ವತಃ ತಾನೆ ಅಥವಾ ಇಲಾಖೆಗೆ ಮಾಹಿತಿ ನೀಡಿ "ಪಶುಭಾಗ್ಯ" ತಂತ್ರಾಂಶದಲ್ಲಿ ಅರ್ಜಿಯನ್ನು ಇಲಾಖೆಯಲ್ಲಿನ ಸವಲತ್ತುಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಬಹುದು.

5) ಫಲಾನುಭವಿಯ ಅಗತ್ಯ ಮತ್ತು ಅರ್ಹತೆಗೆ ತಕ್ಕಂತೆ ವಿವಿಧ ಯೋಜನೆ ಹಾಗೂ ಘಟಕಗಳಿಗೆ ಬೇಡಿಕೆಯನ್ನು ಒಂದೇ ಬಾರಿಗೆ ನೀಡಬಹುದು. ತದನಂತರ ಯಾವಾಗಲಾದರೂ ಬೇಡಿಕೆಯನ್ನು ಪರಿಷ್ಕರಿಸಿ ತಂತ್ರಾಂಶದಲ್ಲಿಯೇ ಮಾಹಿತಿ ನೀಡಬಹುದು.

6) ಫಲಾನುಭವಿಗೆ ತನ್ನ ಅರ್ಜಿಯ ಹಂತವನ್ನು ಅಂದರೆ ಆಯ್ಕೆಯಾಗಿದೆಯೇ, ಆಯ್ಕೆಯಾಗಿದಲ್ಲಿ ಯಾವ ಕಛೇರಿಯಲ್ಲಿದೆ ಮುಂತಾದ ಮಾಹಿತಿಯನ್ನು ತಂತ್ರಾಂಶದ ಮೂಲಕ ತಿಳಿದುಕೊಳ್ಳಬಹುದು. ಇದರಿಂದಾಗಿ ಯೋಜನೆಯ ಅನುಷ್ಠಾನ ಪಾರದರ್ಶಕವಾಗಿರುತ್ತದೆ.

-2-

(ಆ) ಇಲಾಖೆಗೆ ಸಂಬಂಧಿಸಿದ ಅನುಕೂಲಗಳು

1) ಫಲಾನುಭವಿಗಳ ಗುರಿ ನಿಗದಿ ಆಯ್ಕೆ ಪ್ರಕ್ರಿಯೆ ಮತ್ತು ಅನುಷ್ಠಾನದ ಹಂತಗಳನ್ನು ನಿಗದಿತ ವೇಳಾಪಟ್ಟಿಯಂತೆ ಮಾಡಬಹುದು.

2) ಯೋಜನೆಯ ವಿವಿಧ ಹಂತಗಳಾದ ಆಯ್ಕೆ, ಬ್ಯಾಂಕಗಳಿಗೆ ಸಲ್ಲಿಕೆ, ಖಜಾನೆಗೆ ಸಲ್ಲಿಕೆ, ಸಹಾಯಧನ ಬ್ಯಾಂಕಗಳಿಗೆ ನೀಡಿಕೆ, ಸವಲತ್ತು ವಿತರಣೆ, ಸವಲತ್ತು ಉಪಯೋಗಿಸಿಕೊಂಡಿರುವ ಮುಂತಾದವುಗಳ ಭೌತಿಕ ಮತ್ತು ಆರ್ಥಿಕ ಮಾಹಿತಿಯನ್ನು ಆಯಾ ಸಮಯ (Real time) ದಲ್ಲಿಯೇ ದೊರೆಯುವುದು.

3) ಈ ರೀತಿ ಆಯಾ ಸಮಯದ (Real time) ಮಾಹಿತಿಯಿಂದ ಯೋಜನೆಯ ಪ್ರಗತಿಯನ್ನು ಗುಣಾತ್ಮಕ ಪರಿಶೀಲನೆ ಮಾಡಿ ಸೂಕ್ತ ನಿರ್ದೇಶನಗಳನ್ನು ನೀಡಲು ಸಾಧ್ಯವಾಗುತ್ತದೆ.

2019–20ನೇ ಸಾಲಿನ ಈ ಮುಂದೆ ತಿಳಿಸಿರುವ ಫಲಾನುಭವಿ ಆಧಾರಿತ ಯೋಜನೆಗಳ ಮಾರ್ಗಸೂಚಿಗಳನ್ನು ಪಾಲಿಸುತ್ತಾ "ಪಶುಭಾಗ್ಯ" ತಂತ್ರಾಂಶದಲ್ಲಿಯೇ ಆಗಿಂದಾಗಲೇ ಎಲ್ಲಾ ಮಾಹಿತಿಯನ್ನು ಇಂದೀಕರಿಸಲು ಆದೇಶಿಸಿದೆ. ಇನ್ನು ಮುಂದೆ ಈ ತಂತ್ರಾಂಶದಲ್ಲಿರುವ ಮಾಹಿತಿ ಆಧಾರದ ಮೇಲೆಯೆ ವಿವಿಧ ಹಂತಗಳಲ್ಲಿ ಅಂದರೆ ರಾಜ್ಯ, ಜಿಲ್ಲಾ, ತಾಲ್ಲೂಕುಗಳ ಪ್ರಗತಿಯನ್ನು ಪರಿಶೀಲಿಸಲಾಗುವುದು. ಹಿಂದಿನ ಐದು ಸಾಲುಗಳಲ್ಲಿ ಅನುಷ್ಠಾನ ಮಾಡಿರುವ ಫಲಾನುಭವಿ ಆಧಾರಿತ ಯೋಜನೆಗಳ ಫಲಾನುಭವಿಗಳ ಮಾಹಿತಿಯನ್ನು ಸಹಾ ಇಂದೀಕರಿಸಲು ಈ ಮೂಲಕ ಸೂಚಿಸಿದೆ.

2. ಯೋಜನಾ ವ್ಯಾಪ್ತಿ

ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

3. ಅರ್ಹ ಫಲಾನುಭವಿಗಳು

ಅ. ಫಲಾನುಭವಿ ಆಧಾರಿತ ಕಾರ್ಯಕ್ರಮಕ್ಕೆ ಅರ್ಹತೆಯ ಮೇರೆಗೆ ಫಲಾನುಭವಿಗಳನ್ನಾಗಿ ಕೂಲಿ ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು.

ಆ. ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3) ಅಲ್ಪಸಂಖ್ಯಾತರಿಗೆ (ಶೇ.15) ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.

ಇ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು. (ಪ್ರಮಾಣ ಪತ್ರದಲ್ಲಿ RD No. ಇರಬೇಕು)

ಈ. ಅರ್ಜಿದಾರರು FRUITS ತಂತ್ರಾಂಶದಲ್ಲಿ ನೊಂದಾಯಿಸಿರಬೇಕು.

4. ಫಲಾನುಭವಿಯ ಆಯ್ಕೆ

ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಸಹಾಯಕ ನಿರ್ದೇಶಕರು / ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಸಾಕಷ್ಟು ಪ್ರಚಾರ ನೀಡಿ (ಪತ್ರಿಕಾ ಪ್ರಕಟಣೆ ಮೂಲಕ) ಆಸಕ್ತಿಯುಳ್ಳವರಿಂದ "ಪಶುಭಾಗ್ಯ" ತಂತ್ರಾಂಶದ ಮುಖಾಂತರ ಫಲಾನುಭವಿಗಳ ಅರ್ಜಿ ಪಡೆದು, ವಿಧಾನ ಸಭಾ ಕ್ಷೇತ್ರದ ಆಯ್ಕೆ ಸಮಿತಿ ಮೂಲಕ ನಿಗದಿಪಡಿಸಿದ ಯೋಜನೆ, ಘಟಕ ಮತ್ತು ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

-3-

3/16/2020 019.jpg



| [illegible] ಆಯ್ಕೆ ಸಮಿತಿ | | |
|---|---|---|
| 1. | ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| 2. | ತಾಲ್ಲೂಕಿನ ಖಾಯಂ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 3. | ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ | ಸದಸ್ಯರು |
| 4. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 5. | ಶಿಶು ಅಭಿವೃದ್ಧಿ ಯೋಜನಾಧಿಕಾರಿ | ಸದಸ್ಯರು |
| 6. | ತಾಲ್ಲೂಕು ಸಹಾಯಕ ನಿರ್ದೇಶಕರು / ಮುಖ್ಯ ಪಶು ವೈದ್ಯಾಧಿಕಾರಿ(ಆಡಳಿತ) | ಸದಸ್ಯ ಕಾರ್ಯದರ್ಶಿ |

ಕೇಂದ್ರಸ್ಥಾನದ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿಯೂ, ಇತರ ತಾಲ್ಲೂಕುಗಳ ಅಧಿಕಾರಿಗಳಾದ ಸದಸ್ಯರುಗಳಾಗಿರುತ್ತಾರೆ.

ವಿಧಾನಸಭೆ ಕ್ಷೇತ್ರದಲ್ಲಿ ಹೆಚ್ಚು ಭೌಗೋಳಿಕ ವಿಸ್ತಾರ ಇರುವ ತಾಲ್ಲೂಕಿನ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ತಾಲ್ಲೂಕು ಪಶು ಆಸ್ಪತ್ರೆಯ / ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ತಾಲ್ಲೂಕು ಕಚೇರಿಯ ಸಹಾಯಕ ನಿರ್ದೇಶಕರು / ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ರವರು ಈ ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ. ಇದೇ ವಿಧಾನಸಭ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಇತರೆ ತಾಲ್ಲೂಕುಗಳ ಸಂಬಂಧಿಸಿದ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು (ಕ್ರಮ ಸಂಖ್ಯೆ 3,4,5,6) ರವರು ಸಹ ಸದಸ್ಯರಾಗಿರುತ್ತಾರೆ. ಅದೇ ರೀತಿ ಇದೆ ಕ್ಷೇತ್ರದಲ್ಲಿ ಹೆಚ್ಚು ತಾಲ್ಲೂಕುಗಳು ಬಂದಲ್ಲಿ ಕ್ಷೇತ್ರದ ಕೇಂದ್ರಸ್ಥಾನದ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿಯೂ ಇತರೆ ತಾಲ್ಲೂಕುಗಳ ಅಧಿಕಾರಿಗಳು ಸಹ ಕಾರ್ಯದರ್ಶಿಗಳಾಗಿರುತ್ತಾರೆ.

5. ಸಮಿತಿಯ ಕಾರ್ಯವ್ಯಾಪ್ತಿ

ಅ. ಫಲಾನುಭವಿಗಳನ್ನು ನಿರ್ದಿಷ್ಟ ಸಮಯದಲ್ಲಿ ವಿವಿಧ ಯೋಜನೆಗಳ ನಿಗದಿತ ಗುರಿಗಳನ್ವಯ ಆಯ್ಕೆ ಮಾಡಿ, ಈ ಕಾರ್ಯಕ್ರಮವು ಯಶಸ್ವಿಯಾಗಿ ಕಾರ್ಯಗತವಾಗಲು ಸಲಹೆ ನೀಡುವುದು.

ಆ. ಯೋಜನೆಯಲ್ಲಿ ಲೋಪದೋಷಗಳು ಕಂಡುಬಂದರೆ ಅಂತಹವುಗಳನ್ನು ನಿವಾರಿಸಲು ಸಲಹೆ ನೀಡುವುದು.

ಇ. ಗುಣಮಟ್ಟದ ವಸ್ತುಗಳನ್ನು ಖರೀದಿಸಲು ಸಲಹೆ ನೀಡುವುದು.

ಈ. ಫಲಾನುಭವಿಯ ನಿರಾಸಕ್ತಿ, ಇನ್ನಿತರೆ ಕಾರಣಗಳಿಂದ ಸರ್ಕಾರದಿಂದ ಬಿಡುಗಡೆ ಆದ ಅನುದಾನವು ಬಳಕೆಯಾಗದ ಸಂದರ್ಭದಲ್ಲಿ ಅನುದಾನಕ್ಕೆ ಅನುಗುಣವಾಗಿ ಪರ್ಯಾಯ ಫಲಾನುಭವಿಗಳನ್ನು ಆಯ್ಕೆ ಮಾಡಿ ಅನುಷ್ಠಾನ ಮಾಡುವುದು.



https://mail.google.com/mail/u/0/?tab=rm&ogbl#inbox/FMfcgxwHMPhrjXrPxGTwlxtnmGqkZzlb?projector=1&messagePartId=0.3 1/1

ಸದಸ್ಯ ಕಾರ್ಯದರ್ಶಿಯವರ ಕಾರ್ಯ

ಅ. ಫಲಾನುಭವಿಗಳ ಆಯ್ಕೆ ಮುಗಿದ ಕೂಡಲೇ "ಪಶುಭಾಗ್ಯ ತಂತ್ರಾಂಶ"ದಲ್ಲಿ ತಪ್ಪದೆ ನಮೂದಿಸುವುದು.

ಆ. ಆಯ್ಕೆ ನಂತರ ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳು ಯೋಜನೆಯನ್ನು ಅನುಷ್ಠಾನ ಮಾಡಲು ಕ್ರಮ ವಹಿಸುವುದು.

6. ಯೋಜನಾ ಅನುಷ್ಠಾನ ವಿಧಾನ

1) ರಾಜ್ಯ ಮಟ್ಟದಲ್ಲಿ ಜಿಲ್ಲೆಯ ಗ್ರಾಮೀಣ ಭಾಗದ ಜನಸಂಖ್ಯೆಗೆ (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ) ಅನುಗುಣವಾಗಿ ಹಾಗೂ ಅಗತ್ಯತೆಯನುಸಾರ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸುವುದು.

2) ಜಿಲ್ಲಾ ಉಪ ನಿರ್ದೇಶಕರುಗಳು ತಾಲ್ಲೂಕುವಾರು ಮತ್ತು ಘಟಕವಾರು ಆಯಾ ತಾಲ್ಲೂಕಿನಲ್ಲಿರುವ ಜನಸಂಖ್ಯೆಗೆ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ / ಸಾಮಾನ್ಯ) ಅನುಸಾರವಾಗಿ ಹಂಚಿಕೆ ಮಾಡುವುದು ಹಾಗೂ ಅದಕ್ಕೆ ತಕ್ಕಂತೆ ಅನುದಾನವನ್ನು ಮರುಹಂಚಿಕೆ ಮಾಡುವುದು.

3) ಸಹಾಯಕ ನಿರ್ದೇಶಕರು ಆಯಾ ತಾಲ್ಲೂಕಿಗೆ ನಿಗದಿಯಾದ ಗುರಿಗಳ ಪೈಕಿ ವಿಧಾನಸಭಾ ಕ್ಷೇತ್ರವಾರು ಗುರಿಗಳನ್ನು ಮತ್ತು ಅದಕ್ಕೆ ತಕ್ಕಂತೆ ಅನುದಾನವನ್ನು ಮರು ಹಂಚಿಕೆ ಮಾಡಿ, ಆಸಕ್ತ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನ ಮಾಡಿ "ಪಶುಭಾಗ್ಯ ತಂತ್ರಾಂಶ"ದಲ್ಲಿ ಅಳವಡಿಸುವುದು.

4) ಸಹಾಯಕ ನಿರ್ದೇಶಕರು ಅರ್ಹ ಫಲಾನುಭವಿಗಳ ಆಯ್ಕೆಗಾಗಿ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿನ ಸಮಿತಿ ಮುಂದೆ ಮಂಡಿಸಲು ಈಗಾಗಲೇ ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು "ಪಶು ಭಾಗ್ಯ ತಂತ್ರಾಂಶ"ದ ಮೂಲಕ ಪಡೆದು ಮಂಡಿಸಿ ನಿಗದಿತ ಗುರಿಗೆ ಅನುಗುಣವಾಗಿ ಆಯ್ಕೆ ಮಾಡುವುದು.

5) ಫಲಾನುಭವಿಗಳನ್ನು ಆಯ್ಕೆಗೊಳಿಸುವಾಗ ಮುಖ್ಯ ಮಂತ್ರಿಗಳ ಕಾರ್ಯಾಲಯದಿಂದ, ಇಲಾಖಾ ಸಚಿವರಿಂದ, ಸಚಿವಾಲಯದಿಂದ, ಆಯುಕ್ತಾಲಯದಿಂದ "ಜನಸ್ಪಂದನ" ಕೋಶದಿಂದ ಸ್ವೀಕರಿಸಿರುವ ಅರ್ಜಿಗಳನ್ನು ಸಹಾ ಫಲಾನುಭವಿಗಳ ಆಯ್ಕೆ ವೇಳೆ ಪರಿಗಣಿಸುವುದು.

6) ಉಪ ನಿರ್ದೇಶಕರು ಜಿಲ್ಲೆಗೆ ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಮಾಹಿತಿ ಪಡೆದು ತಾಲ್ಲೂಕುವಾರು ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಬ್ಯಾಂಕ್‌ವಾರು ನಿಗದಿಪಡಿಸಲು ಕ್ರಮವಹಿಸುವುದು.

7) ಫಲಾನುಭವಿಗಳಿಂದ ವಂತಿಗೆ ಸ್ವೀಕರಿಸುವಂತಹ ಯೋಜನೆಗಳನ್ನು ವಂತಿಗೆ ಹಣವನ್ನು ಫಲಾನುಭವಿಗಳಿಂದ ಅವರ ಬ್ಯಾಂಕ್ ಖಾತೆಗೆ ಜಮ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಸ್ವತ್ತನ್ನು ಮಾರಾಟ ಮಾಡಿರುವವರಿಗೆ ಪಾವತಿಸುವಂತೆ ಅನುಷ್ಠಾನಾಧಿಕಾರಿಗಳೇ ಕಾರ್ಯಗತಗೊಳಿಸುವುದು.

8) ಸಹಾಯಕ ನಿರ್ದೇಶಕರು ವಿಳಂಬವಿಲ್ಲದೆ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ದಾಖಲೆಗಳೊಂದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್‌ಗಳಿಗೆ ಸಲ್ಲಿಸುವುದು ಹಾಗು ಈ ಬಗ್ಗೆ ಪಶುಭಾಗ್ಯ ತಂತ್ರಾಂಶದಲ್ಲಿ ನಮೂದಿಸುವುದು.

9) ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಂಬಂಧಿಸಿದ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಪತ್ರ ಪಡೆದು ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

----5

10) ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕ್ ಹಾಗು ಸಹಕಾರಿ ಸಂಸ್ಥೆಗಳ ಮುಖಾಂತರವೂ ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.

11) ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಅವರ ಬ್ಯಾಂಕುಗಳಿಗೆ ಜಮೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.

12) ಆಯ್ಕೆಗೊಂಡ ಫಲಾನುಭವಿಗಳ ರಾಸುಗಳಿಗೆ UID ಸಂಖ್ಯೆ ಇರುವ ಟ್ಯಾಗಗಳನ್ನು ಅಳವಡಿಸಿ, ಫಲಾನುಭವಿ, ಮಾರಾಟಗಾರರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಸ್ವತ್ತಿನೊಂದಿಗೆ ಇರುವ ಫೋಟೋವನ್ನು "ಪಶುಭಾಗ್ಯ ತಂತ್ರಾಂಶ"ದಲ್ಲಿ ಎಲ್ಲಾ ವಿವರಗಳೊಂದಿಗೆ ದಾಖಲಿಸುವುದು.

13) ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ದನದ ಕೊಟ್ಟಿಗೆ ನಿರ್ಮಾಣಕ್ಕಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (MGNREGA) ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯ್ತಿ ಪಿ.ಡಿ.ಓ.ಗಳಿಗೆ ಹಾಗು ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳಿಗಳಿಗೆ ಮಾಹಿತಿ ನೀಡುವುದು.

14) ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಸಹಾಯಧನದ ಸವಲತ್ತು ಪಡೆದಿರುವ ಕುಟುಂಬಗಳು ಮತ್ತೆ ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.

15) ಈ ಯೋಜನೆಯಡಿಯ ಫಲಾನುಭವಿಗಳ ಸ್ವತ್ತುಗಳನ್ನು ವಿಮೆಗೊಳಪಡಿಸಲು ಕ್ರಮ ವಹಿಸುವುದು.

16) ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧಿಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮವಹಿಸುವುದು.

17) ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ತಪ್ಪದೆ ಕ್ರಮವಹಿಸುವುದು.

7. ಯೋಜನಾ ಅನುಷ್ಠಾನಾಧಿಕಾರಿಗಳು

ಸ್ಥಳೀಯ ಅಧಿಕಾರಿಗಳಾದ ಸಹಾಯಕ ನಿರ್ದೇಶಕರು ಅಥವಾ ಪಶುವೈದ್ಯಾಧಿಕಾರಿಗಳು ಯೋಜನೆಯ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಮತ್ತು ಈ ಕೆಳಗಿನ ಎಲ್ಲ ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ನಿರ್ವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ.

1) ಸಾಲ ಮಂಜೂರಾತಿ ಪತ್ರ.
2) FRUITS ID ದೃಢೀಕರಣ ಪತ್ರ
3) ಫಲಾನುಭವಿಯಿಂದ ಸಹಾಯಧನ ಸ್ವೀಕೃತಿ ಪತ್ರ.
4) ಫಲಾನುಭವಿಯೊಂದಿಗೆ ರಾಸುವಿನ ಭಾವಚಿತ್ರ – 3 ವಿವಿಧ ಕೋನಗಳಲ್ಲಿ.
5) ಸ್ವತ್ತು ಖರೀದಿ ನಗದು ರಶೀದಿ.
6) ಜಾನುವಾರು ಆರೋಗ್ಯ ದೃಢೀಕರಣ ಪತ್ರ, ವಿಮಾ ಪಾಲಿಸಿ.
7) ಸಾಗಾಣಿಕೆ ವೆಚ್ಚದ ಬಿಲ್ (ರಶೀದಿ).
8) ಪಶು ಆಹಾರ ಖರೀದಿ ಬಿಲ್‌ಗಳು.
9) ಇತರೆ ದಾಖಲಾತಿಗಳು.

--6

8. ಸಹಾಯಧನ ಸೆಳೆಯುವ ವಿಧಾನ

ಅನುಷ್ಠಾನಾಧಿಕಾರಿಗಳು ಫಲಾನುಭವಿ ಪಟ್ಟಿಯನ್ನು ರಾಜ್ಯ ವಲಯದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಬಿಡುಗಡೆಯಾದ ಬಿಲ್ಲಿನಲ್ಲಿ ತಯಾರಿಸಿ ಕೆಳಕಂಡ ದಾಖಲಾತಿಗಳು ಮತ್ತು ದೃಢೀಕರಣದೊಂದಿಗೆ ಮೇಲುರುಜುವಿಗಾಗಿ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.

1) ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಸಮಿತಿ ಸದಸ್ಯರುಗಳ ಸಹಿಯೊಂದಿಗೆ ಪಟ್ಟಿಯನ್ನು ಪಶು ಭಾಗ್ಯ ತಂತ್ರಾಂಶದಲ್ಲಿರುವ ಮಾಹಿತಿಯೊಂದಿಗೆ ಉಪ ನಿರ್ದೇಶಕರು ಪರಿಶೀಲಿಸುವುದು.
2) FRUIT ID ಇರುವ ದೃಢೀಕರಣ ಪತ್ರ
3) ಫಲಾನುಭವಿಯ ಭಾವಚಿತ್ರ
4) ಫಲಾನುಭವಿಯ ಕುಟುಂಬ ಈ ಹಿಂದೆ ಇಲಾಖೆಯಿಂದ ಸಹಾಯ ಪಡೆದಿರುವ ಬಗ್ಗೆ ದೃಢೀಕರಣ ಪತ್ರ
5) ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ (ನಿಗದಿತ ನಮೂನೆಯಲ್ಲಿ)ಪಡೆಯುವುದು.
6) ಫಲಾನುಭವಿಯಿಂದ ಸಹಾಯಧನ ಪಡೆದಿರುವ ಬಗ್ಗೆ ಮುಂಗಡ ರಶೀತಿ (ತ್ರಿಪ್ರತಿಯಲ್ಲಿ)

9. ಸ್ವತ್ತು ಖರೀದಿ ಸಮಿತಿ

1) ಫಲಾನುಭವಿಯ, ಗ್ರಾಮ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಸಹಾಯಕ ನಿರ್ದೇಶಕರು / ಪಶುವೈದ್ಯಾಧಿಕಾರಿ.
2) ಬ್ಯಾಂಕ್ ಅಧಿಕಾರಿ / ಪ್ರತಿನಿಧಿ (ಬ್ಯಾಂಕುಗಳಿಂದ ಸಾಲ ಪಡೆದ ಯೋಜನೆಗಳಿಗೆ ಮಾತ್ರ)
3) ಫಲಾನುಭವಿ.
4) ಮಾರಾಟಗಾರ

9. ಯೋಜನೆ ಮೇಲ್ವಿಚಾರಣೆ

1) ಅನುಷ್ಠಾನಾಧಿಕಾರಿಗಳು ಸ್ವತ್ತು ಖರೀದಿ ಸಮಿತಿ ಮೂಲಕ ರಾಸುಗಳ ಖರೀದಿ ಮಾಡುವುದು
2) ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.
3) ಅನುಷ್ಠಾನಾಧಿಕಾರಿಗಳು ಯೋಜನೆಯಲ್ಲಿ ನೀಡಿದ ರಾಸುಗಳ ಆರೋಗ್ಯ ರಕ್ಷಣೆ, ಲಸಿಕೆ ಕಾರ್ಯಕ್ರಮ ಕೈಗೊಳ್ಳುವುದು
4) ವಿತರಿಸಿದ ಸ್ವತ್ತುಗಳ ಅನುಪಾಲನೆ ವಹಿ (Asset register) ನಿರ್ವಹಿಸುವುದು.
5) ಅನುಷ್ಠಾನಾಧಿಕಾರಿಗಳು ಹಣ ವಿನಿಯೋಗ ದೃಢೀಕರಣ ಪತ್ರಗಳನ್ನು ಬ್ಯಾಂಕ್‌ಗಳಿಂದ ಪಡೆದು, ದೃಢೀಕರಿಸಿ ತಾಲ್ಲೂಕು ಸಹಾಯಕ ನಿರ್ದೇಶಕರುಗಳ ಮೂಲಕ ಉಪ ನಿರ್ದೇಶಕರಿಗೆ ಸಲ್ಲಿಸುವುದು.
6) ಉಪ ನಿರ್ದೇಶಕರುಗಳು ಯೋಜನೆಯ ಅನುಷ್ಠಾನದ ಬಗ್ಗೆ ಹಾಗೂ ಯೋಜನೆಯ ಅನುಸರಣೆ / ಪ್ರಗತಿಯ ಬಗ್ಗೆ ಕಾಲಕಾಲಕ್ಕೆ ವರದಿ ಪಶು ಭಾಗ್ಯ ತಂತ್ರಾಂಶದಲ್ಲಿ ಸಲ್ಲಿಸುವುದು.
7) ಜಿಲ್ಲೆಯ ಉಪ ನಿರ್ದೇಶಕರು ಅನುಷ್ಠಾನಗೊಂಡ ಯೋಜನೆಯ ಪ್ರತಿ ತಾಲ್ಲೂಕಿನ ಕನಿಷ್ಠ ಶೇ.2 ರಷ್ಟು ಹಾಗೂ ತಾಲೂಕು ಸಹಾಯಕ ನಿರ್ದೇಶಕರು ಶೇ.5ರಷ್ಟು ಫಲಾನುಭವಿಗಳ ಮನೆಗೆ ಭೇಟಿ ನೀಡಿ ಅನುಷ್ಠಾನದ ಮತ್ತು ಸ್ವತ್ತನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲನೆ ಮಾಡಬೇಕು.

---7

8) ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಂಡ ನಂತರ ಕನಿಷ್ಠ ಭೇಟಿ ಮಾಡಿ ಎಮ್ಮೆ ಮಿಶ್ರ ತಳಿ ಸ್ವತ್ತು ಖರೀದಿಸಿ ಮಾಹಿತಿ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸುವುದು ಮತ್ತು ಈ ಕುರಿತು ಸ್ಪಷ್ಟ ಅನುಸರಣೆ ವರದಿಯಲ್ಲಿ ಸಮರ್ಪಿಸುವುದು.

10. ಕ್ರಮಗಳು

1) ಸ್ವತ್ತು ಖರೀದಿ ಸಮಯದಲ್ಲಿ ಫಲಾನುಭವಿಗೆ ಸೂಕ್ತವಾದ ತಳಿಯನ್ನು ಖರೀದಿಗೆ ಅನುಮತಿ ನೀಡುವುದು.

2) ವಿವಿಧ ಯೋಜನೆಗಳಲ್ಲಿ ಬರುವ ಘಟಕದಲ್ಲಿರುವಂತೆ ರಾಸುಗಳನ್ನು ಖರೀದಿಸಿ, ಮೂರು ವರ್ಷದ ವಿಮೆ ಕಡ್ಡಾಯವಾಗಿ ಮಾಡಿಸುವುದು.

3) ಸ್ವತ್ತು ಖರೀದಿ ಮಾಡುವಾಗ: ತುಂಬು ಗರ್ಭದಿಂದಿರುವ ಅಥವಾ ಇತ್ತೀಚೆಗೆ ಕರು ಹಾಕಿದ (Recently Calved) ದಿನಕ್ಕೆ 08 ರಿಂದ 10 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಮಿಶ್ರ ತಳಿ ಹಸು ಅಥವಾ ಇತ್ತೀಚೆಗೆ ಕರು ಹಾಕಿದ / ತುಂಬು ಗರ್ಭದ ದಿನಕ್ಕೆ 05 ರಿಂದ 06 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಒಂದು ಸುಧಾರಿತ ಎಮ್ಮೆ ಖರೀದಿ ಮಾಡುವುದು.

4) ಹೈನುಗಾರಿಕೆ ಯೋಜನೆಯಡಿಯಲ್ಲಿ ಖರೀದಿ ಸಮಿತಿಯ ನಿರ್ದೇಶನಗಳಿಗೆ ಒಳಪಟ್ಟು ರಾಸುಗಳನ್ನು ಹೊರ ಜಿಲ್ಲೆ / ಹೊರ ರಾಜ್ಯಗಳಿಂದ ಖರೀದಿಸುವುದು.

5) ಮಿಶ್ರ ತಳಿ ಹಸು / ಸುಧಾರಿತ ಎಮ್ಮೆ / ರಾಸುಗಳನ್ನು ಖರೀದಿ ಸ್ಥಳದಿಂದ ಫಲಾನುಭವಿಯ ಕೊಟ್ಟಿಗೆಯವರೆಗೆ ಸಾಗಾಣಿಕೆ ಮಾಡಲು ಭರಿಸುವ ವೆಚ್ಚವನ್ನು ಯೋಜನಾ ವೆಚ್ಚದಿಂದಲೇ ನೀಡುವುದು.

6) ಹಂದಿ ಮಾಂಸದ ಘಟಕದ ಯೋಜನೆಯನ್ನು ಯೋಜನಾ ವರದಿಯಲ್ಲಿರುವಂತೆ ಅನುಷ್ಠಾನಗೊಳಿಸುವುದು (ಲಗತ್ತಿಸಿದೆ).

11. ಅನುಷ್ಠಾನಗೊಳಿಸಬಹುದಾದ ವಿವಿಧ ಘಟಕಗಳು

| ಕ್ರ. ಸಂಖ್ಯೆ | ಘಟಕದ ವಿವರ | ಘಟಕದ ಮೊತ್ತ | ಸಹಾಯಧನ ಪ.ಜಾ/ಪ.ಪಂ (ಶೇ90) | ಸಹಾಯಧನ ಸಾಮಾನ್ಯ (ಶೇ50) |
|---|---|---|---|---|
| 1 | ಹೈನುಗಾರಿಕೆ ಘಟಕ* (ಒಂದು ಮಿಶ್ರ ತಳಿ ಹಸು ಅಥವಾ ಸುಧಾರಿತ ಎಮ್ಮೆ) | 60,000 | 54,000 | 30,000 |
| 2 | ಕುರಿ ಅಥವಾ ಆಡುಗಳು ಘಟಕ (10+1)* | 70,000 | 63,000 | – |
| 3 | ಹಂದಿ ಮಾಂಸದ ಮಳಿಗೆ ಘಟಕ* | 1,50,000 | 1,35,000 | – |
| 4 | 3 ಕುರಿ ಅಥವಾ 3 ಆಡುಗಳು** | 15,000 | 13,500 | 10,000 |
| * | ಕ್ರಮ ಸಂಖ್ಯೆ 1 ರಿಂದ 3ರವರೆಗಿನ ಯೋಜನೆಗಳಿಗೆ ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು | | | |
| ** | ಕ್ರಮ ಸಂಖ್ಯೆ 4ರ ಯೋಜನೆಗೆ ಘಟಕದ ಸಹಾಯಧನವನ್ನು ಬಿಟ್ಟು ಉಳಿದ ಮೊತ್ತವನ್ನು ಫಲಾನುಭವಿಗಳಿಂದ ಬ್ಯಾಂಕ್ ಖಾತೆಗೆ ಜಮ ಮಾಡಿಸಿ, ಸಹಾಯಧನವನ್ನು ಸಹ ಖಾತೆಗೆ ಜಮಾ ಮಾಡಿ, ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಳಿಸುವುದು | | | |

ಘಟಕದ ವಿವರಗಳು

1) ಹೈನುಗಾರಿಕೆ ಘಟಕ ವಿವರ

| ಕ್ರ.ಸಂ. | ವಿವರ | ಮೊತ್ತ (ರೂಗಳಲ್ಲಿ) |
|---|---|---|
| 1 | ಒಂದು ಮಿಶ್ರ ತಳಿ ಹಾಲು ಕರೆಯುವ ಹಸು (08-10 ಲೀ) ಅಥವಾ ಸುಧಾರಿತ ಎಮ್ಮೆ (05-06 ಲೀ) ಖರೀದಿಗೆ (ಗರಿಷ್ಠ ಮೊತ್ತ) | 52,000 |
| | ಅ) ಜಾನುವಾರು ವಿಮೆ ಮೊತ್ತ (ಮೂರು ವರ್ಷಕ್ಕೆ) | 2,500 |
| | ಆ) ಸಾಗಾಣಿಕೆ ವೆಚ್ಚ (ಗರಿಷ್ಠ) ಮತ್ತು ಇತರೆ | 2,500 |
| | ಇ) ಪಶು ಆಹಾರ ಮತ್ತು ಲವಣ ಮಿಶ್ರಣ ವೆಚ್ಚ | 3,000 |
| | ಒಟ್ಟು ಮೊತ್ತ | 60,000 |

--8

ಕುರಿ ಅಥವಾ ಆಡುಗಳ ಘಟಕ (10+1)

| ಕ್ರ. ಸಂ. | | ಮೊತ್ತ (ರೂಗಳಲ್ಲಿ) |
|---|---|---|
| 1 | ಆರು ತಿಂಗಳ ವಯಸ್ಸಿಗೆ ಮೇಲ್ಪಟ್ಟ 10 ಕುರಿ/ಮೇಕೆ ಖರೀದಿಗೆ ( ಒಂದು ಕುರಿ/ಮೇಕೆಗೆ 6000/-ರಂತೆ) ಗರಿಷ್ಠ ಮೊತ್ತ | 60,000 |
| 2 | ಆರು ತಿಂಗಳ ವಯಸ್ಸಿಗೆ ಮೇಲ್ಪಟ್ಟ ಒಂದು ಟಗರು / ಹೋತ ಖರೀದಿ ಮೊತ್ತ | 8,000 |
| 3 | ಸಾಗಾಣಿಕೆ ಮತ್ತು ಇತರೆ ವೆಚ್ಚ | 2,000 |
| | ಒಟ್ಟು ಮೊತ್ತ | 70,000 |

2) ಹಂದಿ ಮಾಂಸದ ಘಟಕ (ವಿಸ್ತೃತ ಯೋಜನಾ ವರದಿ ಲಗತ್ತಿಸಿದೆ)

| | | ಮೊತ್ತ (ರೂಗಳಲ್ಲಿ) |
|---|---|---|
| 1 | ಮಾಂಸದ ಅಂಗಡಿ ನವೀಕರಣ / ನಿರ್ಮಾಣ ಗರಿಷ್ಠ | 60,000 |
| 2 | ಕಟ್ಟಡದ ಒಳಗೆ ವಿಭಜಕಗಳನ್ನು ಮಾಡಲು | 40,000 |
| 3 | ಎರಡು 400 ಲೀಟರ್ ಶೈತ್ಯಾಗಾರಗಳನ್ನು ಕೊಳ್ಳಲು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು | 60,000 |
| 4 | ತೂಕದ ಯಂತ್ರ, ನೀರಿನ ವ್ಯವಸ್ಥೆ, ಮಾಂಸ ಕತ್ತರಿಸಲು ಬೇಕಾದ ಪರಿಕರಗಳು ಮತ್ತು ಪ್ಯಾಕಿಂಗ್ ವಸ್ತುಗಳು | 50,000 |
| | ಒಟ್ಟು ಮೊತ್ತ | 1,50,000 |

3) 3 ಕುರಿ ಅಥವಾ 3 ಆಡುಗಳ ಘಟಕ

| | | ಮೊತ್ತ (ರೂಗಳಲ್ಲಿ) |
|---|---|---|
| 1 | ಆರು ತಿಂಗಳ ವಯಸ್ಸಿನ 03 ಕುರಿ / ಮೇಕೆ ಖರೀದಿಗೆ (ಒಂದು ಕುರಿ/ಮೇಕೆಗೆ 5000/-ರಂತೆ) ಗರಿಷ್ಠ ಮೊತ್ತ | 15,000 |

23/07/2019

(ಟಿ. ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)